ರಾಜ್ಯದಲ್ಲಿ ನದಿ ದಾಟಲು ಬಳಸುವ ಲಾಂಚ್ ವ್ಯವಸ್ಥೆ ಬಗ್ಗೆ.

589 (5596) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

೧) ರಾಜ್ಯದಲ್ಲಿ ನದಿ ದಾಟಲು ಬಳಸುವ ಲಾಂಚ್ ವ್ಯವಸ್ಥೆಯನ್ನು ಯಾವ ಯಾವ ಜಿಲ್ಲೆಗಳ ಯಾವ ಯಾವ ನದಿಗಳಿಗೆ ಕಲ್ಪಿಸಲಾಗಿದೆ;

೨) ಲಾಂಚ್ ವ್ಯವಸ್ಥೆ ಕಲ್ಪಿಸುವ ಬದಲಿಗೆ ಶಾಶ್ವತವಾಗಿ ಓಡಾಟಕ್ಕೆ ರಸ್ತೆ ಸೇತುವೆ ನಿರ್ಮಿಸುವ ಬಗ್ಗೆ ಸರ್ಕಾರದ ನಿಲುವೇನು;

೩) ಲಾಂಚ್ ಮೂಲಕ ಪ್ರಯಾಣಿಕರನ್ನು ಸಾಗಿಸಲು ವ್ಯವಸ್ಥೆ ಇರುವ ಶರಾವತಿ ನದಿ ದಾಟಿಸುವ ಯಂತ್ರ ರಂಧ್ರ ಬಿದ್ದು ಈ ಭಾಗದ ಪ್ರಯಾಣಿಕರು ಪ್ರಯಾಣಿಸಲು ಆತಂಕ ಪಡುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿಲ್ಲವೇ;

೪) ಹಾಗಿಲ್ಲದಿದ್ದಲ್ಲಿ, ಇದಕ್ಕೆ ಪರ್ಯಾಯ ವ್ಯವಸ್ಥೆ ಕಲ್ಪಿಸುವ ಬಗ್ಗೆ ಸರ್ಕಾರದ ಯೋಜನೆ ಇದೆಯೆ; ..

೫) ಹೊಸನಗರದ ತಾ: ಆಡುಗೋಡಿಯಿಂದ ಸಾಗರ ತಾ: ಜೊತೆ ಸಂಪರ್ಕ ಕಲ್ಪಿಸುವ ಲಾಂಚ್‌ಗೆ ಬದಲಾಗಿ ಸೇತುವೆ ನಿರ್ಮಾಣ ಮಾಡುವ ಬಗ್ಗೆ ಸರ್ಕಾರ ಯೋಚಿಸಿದೆಯೇ?

ಶ್ರೀ ಬಿ. ರಮಾನಾಥ್ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು) :—

೧) ವಿವರಣೆಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.

೨) ಅನುದಾನದ ಲಭ್ಯತೆ ಯೋಜನೆಯ ಅಧ್ಯತೆ ಮತ್ತು ತಾಂತ್ರಿಕ ಸಾಧುತ್ವವನ್ನು ಪರಿಗಣಿಸಿ ಶಾಶ್ವತವಾದ ಓಡಾಟಕ್ಕೆ ಸೂಕ್ತವಾದ ಸೇತುವೆ ನಿರ್ಮಾಣವನ್ನು ಕೈಗೊಳ್ಳಲು ಸರ್ಕಾರ ಆಸಕ್ತಿ ಹೊಂದಿರುತ್ತದೆ.

೩) ಹೌದು. ಹೊಂದಿದೆ.

೪) ಹಳೆಯ ಎಲ್.ಸಿ.ಟಿ. ಬದಲಿಗೆ ಒಂದು ಹೊಸ ಎಲ್.ಸಿ.ಟಿ.ಯನ್ನು ಒದಗಿಸುವ ಬಗ್ಗೆ ಈಗಾಗಲೇ ಸರ್ಕಾರ ಕ್ರಮ ಕೈಗೊಂಡಿದೆ.

೫) ಸೇತುವೆ ನಿರ್ಮಾಣದ ಬಗ್ಗೆ ಪರಿಶೀಲಿಸಲಾಗುವುದು.

ಅನುಬಂಧ-1

ನಾವೆ ನಡೆಸುವ ನದಿ ಹಾಗೂ ಜಿಲ್ಲೆ ವಿವರ

೧)	ಹಾವೇರಿ ನದಿ	-	ಮೈಸೂರು ಜಿಲ್ಲೆ
೨)	ಕಬಿನಿ	-	"
೩)	ನೇತ್ರಾವತಿ	-	ದಕ್ಷಿಣ ಕನ್ನಡ ಜಿಲ್ಲೆ
೪)	ಸುಪರ್ಣ	-	ಉಡುಪಿ ಜಿಲ್ಲೆ
೫)	ಗುರುಪುರ	-	ದಕ್ಷಿಣ ಕನ್ನಡ ಜಿಲ್ಲೆ
೬)	ಸೀತಾ	-	ಉಡುಪಿ
೭)	ಕಾಳಿ	-	ಉತ್ತರ ಕನ್ನಡ
೮)	ಅಘನಾಶಿನಿ	-	"
೯)	ಗಂಗಾವಳಿ	-	"
೧೦)	ಶರಾವತಿ	-	ಶಿವಮೊಗ್ಗ ಉತ್ತರ ಕನ್ನಡ
೧೧)	ತುಂಗಭದ್ರ	-	ಧಾರವಾಡ, ಬಳ್ಳಾರಿ, ಗದಗ
೧೨)	ಕೃಷ್ಣಾ	-	ಬೆಳಗಾಂವ್, ಬಿಜಾಪುರ ಬಾಗಲಕೋಟೆ
೧೩)	ಘಟಪ್ರಭಾ	-	ಬಾಗಲಕೋಟೆ, ಬೆಳಗಾಂವ್
೧೪)	ಭೀಮಾ	-	ಗುಲ್ಬರ್ಗಾ
೧೫)	ಮಲಪ್ರಭಾ	-	ಬಾಗಲಕೋಟೆ, ಧಾರವಾಡ

ಶ್ರೀ ಅರಗ ಜ್ಞಾನೇಂದ್ರ :— ಈಗಾಗಲೇ ಯಾವುದಾದರೂ ಇಂಥ ಲಾಂಚ್ ಅನ್ನು ತೆಗೆದು, ಸೇತುವೆ ಕಟ್ಟಲು ಇರುವ ಸ್ಥಳ ಗುರುತಿಸಿ, ಅದರ ಬಗ್ಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆಯೇ? ನನ್ನ ಕ್ಷೇತ್ರದ ಹೊಸನಗರ ತಾಲ್ಲೂಕಿನ ಆಡುಗೋಡಿಯಿಂದ ಹಸಿರುಮಕ್ಕಿ ಎನ್ನುವ ಸ್ಥಳದಲ್ಲಿ ಶರಾವತಿ ನದಿ ಸಾಗರ ತಾಲ್ಲೂಕಿಗೆ ಸಂಪರ್ಕ ಕಲ್ಪಿಸುವ ಅತಿ ಮಹತ್ವದ ಕಡವುನಲ್ಲಿ ಸೇತುವೆ ನಿರ್ಮಿಸಲು ಬಹಳ ವರ್ಷಗಳಿಂದ ಸಾರ್ವಜನಿಕರ ಬೇಡಿಕೆ ಇದೆ. ಇದು ಸರ್ಕಾರದ ಗಮನದಲ್ಲಿದೆಯೇ? ಆ ಬಗ್ಗೆ ಏನಾದರೂ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆಯೇ? ಪಿಡಬ್ಲ್ಯೂಡಿ ಸಚಿವರು, ಲಾಂಚ್ ವ್ಯವಸ್ಥೆಯಿಂದ ಹಸಿರುಮಕ್ಕಿಯಲ್ಲಿ ಸರ್ಕಾರದಿಂದ ಆಗದೇ ಹೋದರೆ ಬಿ.ಓ.ಟಿ. ಸಿಸ್ಟಂನಲ್ಲಾದರೂ ಕೂಡ ಸೇತುವೆ

ನಿರ್ಮಿಸಲು ಸಾಧ್ಯವೆ ಎಂದು ತಿಳಿಸಬೇಕು. ಇದು ಅತ್ಯಂತ ಮಹತ್ವದ ಕಡವು. ಕೊಲ್ಲೂರು ಮತ್ತು ಸಾಗರವನ್ನು ಸಂಪರ್ಕಿಸುವ ಮತ್ತು ಸಾವಿರಾರು ಜನ, ವಾಹನಗಳು ಓಡಾಡುವ ದಾರಿಯಾಗಿದ್ದು, ಇಲ್ಲಿ ಸೇತುವೆ ನಿರ್ಮಿಸಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಬಿ. ರಮಾನಾಥ ರೈ :— ಮಾನ್ಯ ಸದಸ್ಯರು ಅವರ ಕ್ಷೇತ್ರದ ಬಗ್ಗೆ ಪ್ರಶ್ನೆ ಕೇಳಿದ್ದು, ಈಗಾಗಲೇ 35 ಕೋಟಿ ರೂಪಾಯಿಗಳ ಅಂದಾಜು ಪಟ್ಟಿಯನ್ನು ಸೇತುವೆ ನಿರ್ಮಿಸಲು ಉದ್ದೇಶಿಸಿ ಲೋಕೋಪಯೋಗಿ ಇಲಾಖೆಯವರು ತಯಾರಿಸಿದ್ದಾರೆ. ನಬಾರ್ಡ್ ಅಥವಾ ಸೇತುವೆಗಳಡಿಯಲ್ಲಿ ಸೇರಿಸುವ ಪರಿಶೀಲನೆ ಸರ್ಕಾರದ ಗಮನದಲ್ಲಿದೆ. ಜೊತೆಗೆ, ಲಾಂಚ್ ಬದಲಾಗಿ ಹೊಸ ಲಾಂಚ್ ಖರೀದಿಸಲು 40 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಅದರ ನಿರ್ಮಾಣಕ್ಕೆ ಗುತ್ತಿಗೆ ನೀಡಲಾಗಿದೆ. ಲಾಂಚ್ ಅನ್ನು ಅದಷ್ಟು ಜಾಗ್ರತೆಯಾಗಿ ಓದಗಿಸಲಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ :— ಅದು ಶರಾವತಿ ಹಿನ್ನೀರಿನಿಂದ ಪ್ರದೇಶವಾಗಿದ್ದು, ನದಿಯಲ್ಲಿ ನೀರು ಕಡಿಮೆಯಾಗ ತಕ್ಷಣ ಆ ಲಾಂಚ್ ಮತ್ತು ಜನರು ಓಡಾಡಲು ತೊಂದರೆಯಾಗುತ್ತದೆ. ಆ ಸೇತುವೆ ಕಟ್ಟುವುದು ಅತಿ ಮಹತ್ವದ ಕಾರ್ಯಕ್ರಮವಾಗಿದೆ. ಪಿಡಬ್ಲ್ಯೂಡಿ ಸಚಿವರು ಇದರ ಬಗ್ಗೆ ಗಮನಹರಿಸಬೇಕು. ದಕ್ಷಿಣ ಕನ್ನಡ ಮತ್ತು ಸಾಗರವನ್ನು ಸಂಪರ್ಕಿಸುವ ಅತಿ ದೊಡ್ಡ ವ್ಯವಸ್ಥೆ ಇದಾಗಿದೆ.

ಶ್ರೀ ಧರ್ಮಸಿಂಗ್ :— ಬಂದರು ಖಾತೆ ಮಂತ್ರಿಗಳು ಆಗಲೇ ತಿಳಿಸಿದಂತೆ, 25 ಕೋಟಿ ರೂಪಾಯಿಗಳ ವೆಚ್ಚದಲ್ಲಾಗಿರುವ ಕೆಲಸವದು. ಬಿ.ಒ.ಟಿ. ಬಗ್ಗೆ ಹೇಳಿದ್ದೀರಿ, ನಾವು ಆಗಲೇ ಕರ್ನಾಟಕ ರಾಜ್ಯದಲ್ಲಿ 29 ಬಿ.ಒ.ಟಿ.ಗೆ ಕೊಡಲು ಅಡ್ವರ್‌ಟೈಸ್ ಮಾಡಿದ್ದೇವೆ. ಅದು ವಯೆಬಲ್ ಇದ್ದರೆ, ಅದನ್ನು ಬಿ.ಒ.ಟಿ.ಯಲ್ಲಿ ತೆಗೆದುಕೊಳ್ಳಲು ಪ್ರಯತ್ನಿಸುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ :— ಅದು ಖಂಡಿತವಾಗಿ ವಯೇಬರ್ ಇದೆ. ಈಗಾಗಲೇ ತಮ್ಮ ಅಧಿಕಾರಿಗಳು ಸ್ಥಳ ಪರಿಶೀಲಿಸಿದ್ದಾರೆ. ಶ್ರೀ ಹಾಗೋಡು ತಿಮ್ಮಪ್ಪನವರು ಇದರಲ್ಲಿ ಪ್ರವೇಶ ಮಾಡಿದರೆ ತುಂಬ ಒಳ್ಳೆಯದಾಗುತ್ತದೆಂಬುದು ನನ್ನ ಅನಿಸಿಕೆ. ಲಾಂಚ್ ಹೊಸದಾಗಿ ಹಾಕುತ್ತೇವೆಂಬ ಭರವಸೆ ಕೊಟ್ಟಿದ್ದೀರಿ. ಲಾಂಚ್‌ಗೆ ಶಾಶ್ವತವಾದ ವ್ಯವಸ್ಥೆ ಇರುವುದಿಲ್ಲ.

ಶ್ರೀ ಬಿ. ರಮಾನಾಥ್ ರೈ :— ಸಚಿವರ ಪ್ರಯತ್ನದಿಂದ ಮಂಜೂರಾಗಿ ತೀರ್ಮಾನವಾಗುತ್ತಿದೆ.

ಶ್ರೀ ಅರಗ ಜ್ಞಾನೇಂದ್ರ :— ಲಾಂಚ್ ವ್ಯವಸ್ಥೆಯಲ್ಲಿ ಎರಡು ತಿಂಗಳ ಕಾಲ ಅಲ್ಲಿ ದಾಟಲು ಆಗುವುದಿಲ್ಲ. ಆ ಸಂದರ್ಭದಲ್ಲಿ ನಡೆಯಲು, ವಾಹನಗಳು ಓಡಾಡಲಾಗುವುದಿಲ್ಲ.

ಸಂಪೂರ್ಣ ಬಂದಾಗುತ್ತದೆ. ಅತ್ಯಂತ ಪ್ರಮುಖವಾದ ಹೆದ್ದಾರಿಯದು. ಹಣವಿಲ್ಲವಾದರೆ, ಬಿ.ಓ.ಟಿ. ಸಿಸ್ಟಂನಲ್ಲಿ ಸೇರಿಸಿದರೆ, ಖಾಸಗಿಯವರು ಬರುತ್ತಾರೆ, ನಾವು ಅವರಿಗೆ ಪ್ರೋತ್ಸಾಹ ಕೊಡಬಹುದು. ತಮ್ಮ ಇಲಾಖೆಯಿಂದ ಏನು ತ್ವರಿತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಕೇಳುತ್ತೇನೆ. ಹತ್ತಾರು ವರ್ಷಗಳಿಂದ ಆ ಭಾಗದ ಜನರು ಇದಕ್ಕೆಂದು ಮನವಿ ಮಾಡುತ್ತಿದ್ದಾರೆ. ಸರ್ಕಾರದ ಕಡೆಯಿಂದ ಸರಿಯಾದ ಭರವಸೆ ಮತ್ತು ಕೆಲಸವಾಗುತ್ತಿಲ್ಲ. ಚಂದ್ರೇಗೌಡರಿಗೂ ಇದು ಗೊತ್ತಿದೆ.

ಶ್ರೀ ಧರ್ಮಸಿಂಗ್ :— ಬಿಟಿಟಿಯಲ್ಲಿ ನಾವು ಅಡ್ವೆಂಚರ್‌ಟೈಸ್ ಮಾಡುತ್ತೇವೆ. ಖಾಸಗಿಯವರು ಬಂದರೆ ಅವರಿಗೆ ವಹಿಸುತ್ತೇವೆ. ಬಂದರು ಖಾತೆಯ ಸಚಿವರು, ನಾನು ಸೇರಿ, ಅಧಿಕಾರಿಗಳ ಜೊತೆ ಸಮಾಲೋಚಿಸಿ ಪರಿಶೀಲಿಸುತ್ತೇವೆ.

ಶ್ರೀ ಎಸ್. ಎಸ್. ಪಾಟೀಲ್ :— ಇದು ಬಹಳ ಮಹತ್ವದ್ದೆಂದು ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಕೊಟ್ಟಿದ್ದಿರಿ.

Mr. Speaker :— Within five minitues, we have B.A.C. meeting. ಅಲ್ಲಿ ಡಿಸ್ಕಡ್ ಮಾಡಿ ಬಂದು ಹೇಳುತ್ತೇನೆ. ನಮ್ಮ ಕಾರ್ಯಕ್ರಮದ ಪ್ರಕಾರ ಡಾ: ರಾಜ್‌ಕುಮಾರ್ ರವರ ಬಗ್ಗೆ ಚರ್ಚೆ ಇತ್ತು. ಈಗ ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಸಚಿವರು ತುರ್ತು ಪತ್ರ ಕಳುಹಿಸಿ, 3-4 ಬಿಲ್‌ಗಳನ್ನು ಮುಗಿಸಿಕೊಡಬೇಕೆಂದು ಹೇಳಿದ್ದಾರೆ. 10 ನಿಮಿಷ ಸಭೆಯನ್ನು ಮುಂದೂಡೋಣ. ಬಿಎಸಿ ಸದಸ್ಯರು ಬನ್ನಿ.

Sri D.B. Chandregowda :— There is no need to adjourn the House.

Mr. Speaker :— We will come back after BAC meeting. The House can go on.

(2) ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ವಿಷಯ: ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿಯ ಒಬ್ಬ ಹೆಣ್ಣು ಮಗಳ ಮಾನಾಪಹರಣವಾಗಿರುವುದು.

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :— ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನಲ್ಲಿ ಒಬ್ಬ ಹರಿಜನ ಹೆಣ್ಣು ಮಗಳ ಮಾನಾಪಹರಣವಾಗಿದೆ. ಕಳೆದ ಮೂರು - ನಾಲ್ಕು ದಿನಗಳ ಹಿಂದೆ ಇದು ನಡೆದಿದೆ. 18ನೇ ತಾರೀಖು ಹೊಳಲ್ಕೆರೆ ತಾಲ್ಲೂಕಿನಲ್ಲಿ ಒಂದು ಸಣ್ಣ ಹಳ್ಳಿಯಲ್ಲಿ ನಡೆದ ಘಟನೆ ಇದುವರೆಗೂ ಸರ್ಕಾರದ